(ಪಿ.ಡಬ್ಲ್ಯೂ4) ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ
ದಿನಾಂಕಃ 02-02-2024
ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

3. ಪೊಲೀಸರು ಲೋಕಾಯುಕ್ತ ಕಛೇರಿಯಲ್ಲಿ ಪಂಚನಾಮೆ ಮಾಡಿದರು. ಅಲ್ಲಿ ವ್ಯಸರೀಕಾರ್ಡರನ್ನು ಕೇಳಿಸಿದರು. ಗುರುಪಾದಪ್ಪ ಮತ್ತು ಸಿದ್ದಯ್ಯಸ್ವಾಮಿ ಅವರ ನಡುವಿನ ಸಂಭಾಷಣೆ ಇತ್ತು. ಸದರಿ ಸಂಭಾಷಣೆಯಲ್ಲಿ 30 ಸಾವಿರ ರೂಪಾಯಿಗಳನ್ನು ಕೇಳಿದ್ದರು. ನಾವು ಬಡವರು ಇದ್ದೇವೆ ಎಂದು ಹೇಳಿದ್ದರಿಂದ 25 ಸಾವಿರ ರೂಪಾಯಿ ಕೊಡಬೇಕು ಎಂದು ಒಪ್ಪಿಕೊಂಡರು. ಆ ಧ್ವನಿಯನ್ನು ಅಣವೀರಪ್ಪ ಮತ್ತು ರಾಘವೇಂದ್ರರಾವ ಅವರು ಆರ್.ಐ. ಸುರಪೂರ ಮತ್ತು ಟೈಪಿಸ್ಟ ಯಾದಗಿರಿ ಅವರು ಧ್ವನಿ ಗುರುತಿಸಿದರು. ಸದರಿ ಧ್ವನಿ ಗುರುತಿಸುವ ಪಂಚನಾಮೆಗೆ ನಾವು ಪಂಚರಾಗಲು ಒಪ್ಪಿಕೊಂಡೆವು. ಮತ್ತೊಂದು ಸಿ.ಡಿ. ಇದ್ದು ಸದರಿ ಸಿ.ಡಿ.ಯನ್ನು ನಮಗೆ ಕೇಳಿಸಿದರು. ಆ ಸಿ.ಡಿ.ಯಲ್ಲಿದ್ದ ಮಾಹಿತಿಯನ್ನು ಬರೆದುಕೊಂಡರು. ಹೊಲದಲ್ಲಿ 2 ಮರಗಳು ಮತ್ತು 2 ಕಂಬಗಳು ಇವೆ ಅವುಗಳನ್ನು ತೆಗೆಯಿಸಿ ಫೋಟೊ ತೆಗೆದುಕೊಳ್ಳಿ ಎಂದು ಹೇಳಿದರು. 2 ನೇ ಸಿ.ಡಿ.ಯಲ್ಲಿ ಗುರುಪಾದಪ್ಪ ಫಿರ್ಯಾದಿದಾರನ ಜೊತೆ ಮಾತನಾಡಿದ್ದನು. 3 ನೇ ಸಿ.ಡಿಯಲ್ಲಿ ಡಿ.ಸಿ. ಆಫೀಸನಲ್ಲಿ ಪೈಲ ಇದೆ ಚೆಕ್ಕುಬಂದಿ ಹಾಗೂ ಮ್ಯಾಪ ನೋಡಿ ಮಾಡತನಾಡುತ್ತೇನೆ. 2-3 ದಿನ ಬಿಟ್ಟು ಡಿ.ಸಿ. ಆಫೀಸಗೆ ಹೋಗಿ ಎಂದು ಹೇಳಿದರು. ಈ ಸಂಭಾಷಣೆ ಗುರುಪಾದಪ್ಪ ಮತ್ತು ಫಿರ್ಯಾದಿದಾರನ ನಡುವೆ ಆಗಿತ್ತು. ಈ ಎಲ್ಲಾ ಮಾಹಿತಿಯನ್ನು ಪೇಪರನಲ್ಲಿ ಬರೆದು ಪಂಚನಾಮೆ ಮಾಡಿ ನಮ್ಮ ಸಹಿ ಪಡೆದುಕೊಂಡರು. 3 ಪಂಚನಾಮೆಗಳಲ್ಲಿ ಅಣವೀರಪ್ಪ ಮತ್ತು ರಾಘವೇಂದ್ರರಾವ ಧ್ವನಿಗಳನ್ನು ಗುರುತಿಸಿದರು. ಅವುಗಳನ್ನು ವಶಕ್ಕೆ ಪಡೆದು ಸೀಲ ಮಾಡಿ ವಶಕ್ಕೆ ಪಡೆದರು. ಸದರಿ ಪಂಚನಾಮೆಗಳನ್ನು ದಿನಾಂಕಃ 15.11.2012 ರಂದು ಲೋಕಾಯುಕ್ತ ಕಛೇರಿಯಲ್ಲಿ ಮಧ್ಯಾಹ್ನ 12-30 ರಿಂದ 2-00 ಗಂಟೆಯ ವರೆಗೆ ಮಾಡಿದರು. ಅವುಗಳಿಗೆ ನಾನು, ಅಣವೀರಪ್ಪ ಮತ್ತು ರಾಘವೇಂದ್ರರಾವ ಸಹಿ ಮಾಡಿದೆವು. ಸದ ಪಂಚನಾಮಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿ.ಪಿ.30 ಸಾಕ್ಷಿಯ ಸಹಿಯನ್ನು ನಿ.ಪಿ.30(ಎ) ಎಂದು ಗುರುತಿಸಲಾಯಿತು. ನಂತರ ನಾನು ನಮ್ಮ ಕಛೇರಿಗೆ ಹೋದೆ. ಸದರಿ ಮು.ಮಾ.1 ರಿಂದ 3 ಸಿ.ಡಿ.ಗಳಲ್ಲಿರುವ ಧ್ವನಿಯನ್ನು ಸಾಕ್ಷಿ ಕೇಳಿ ಗುರುತಿಸಿರುತ್ತಾರೆ. ಅವುಗಳ ಮೇಲೆ ಅಟ್ಟಿಸಿರುವ ಸಹಿ ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಬಿ.ಎಮ್.ಆರ್. ವಕೀಲರಿಂದ

4. ದಿನಾಂಕಃ 15-11-2012 ರಂದು ನಾನು ನಮ್ಮ ಕಛೇರಿಯಲ್ಲಿ ದಿನಚರಿಯಲ್ಲಿ ಸಹಿ ಮಾಡಿರುತ್ತೇನೆ. ನಮ್ಮ ಕಛೇರಿಯಲ್ಲಿ ನಾನು ಆದಿನ ಮಧ್ಯಾಹ್ನ 12-30 ರಿಂದ 2-30ರ ವರೆಗೆ ಲೋಕಾಯುಕ್ತ ಕಛೇರಿಗೆ ಹೋದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನನಗೆ ಫಿರ್ಯಾದಿ ಮತ್ತು ಆರೋಪಿತರು ಪರಿಚಿತರಲ್ಲ. ನನಗೆ ಸಿ.ಡಿ.ಗಳನ್ನು ಕೇಳಿಸುವ ಮೊದಲು ಅವು ಹಾಗೇ ಇದ್ದವು. ನಾನು ಈ ದಿನ ನ್ಯಾಯಾಲಯದಲ್ಲಿ ಕೇಳಿಸಿಕೊಂಡ ಆ ಸಿ.ಡಿ.ಗಳಲ್ಲಿ ಇದ್ದ ಧ್ವನಿ ಇಂಥವರದೇ ಎಂದು ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ಅಣವೀರಪ್ಪ ಮತ್ತು ರಾಘವೇಂದ್ರ ನನಗೆ ಮೊದಲಿನಿಂದಲೂ ಪರಿಚಯ ಇಲ್ಲ. ರಾಘವೇಂದ್ರ ಅವರು ಟೈಪಿಸ್ಟ ಮತ್ತು ಅಣವೀರಪ್ಪ ಆರ್.ಐ. ಆರೋಪಿ ಸುರಪೂರ ಸರ್ಕಲನಲ್ಲಿ ಆರ್.ಐ. ಇದ್ದರು. ನಾನು ಕೇಳಿದ ಸಿ.ಡಿ.ಯಲ್ಲಿ ಆರೋಪಿಗೆ ಯಾವುದಾದರೂ ಕೆಲಸ ಒಪ್ಪಿಸಿದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ ಬಗ್ಗೆ ಮಾತುಕತೆಯಾಗಿದೆ. ಆರೋಪಿ ಗ್ರಾಮಲೇಖಿಗ ಎಂದು ಕೆಲಸ ಮಾಡುತ್ತಿದ್ದ ಎಂದರೆ ಸರಿ. ತಹಶೀಲ್ದಾರ ಕಛೇರಿಯಲ್ಲಿ ನೇಮಕವಾಗಿರುವ ಸರ್ವೆಯರಗಳು ಸರ್ವೆ ಕೆಲಸ ಮಾಡುತ್ತಾರೆ ಎಂದರೆ ಸರಿ. ಫಿರ್ಯಾದಿಗೆ ಸಂಬಂಧಪಟ್ಟ ಜಮೀನಿನ ಸರ್ವೆ ಕೆಲಸ ಆರೋಪಿಯ ಬಳಿ ಬಾಕಿ ಇತ್ತು ಎಂದು ನನಗೆ ಆ ಧ್ವನಿ ಮುದ್ರಣದಲ್ಲಿ ಕೇಳಿಸಿತು. ಆರೋಪಿಯ ಬಳಿ ಫಿರ್ಯಾದಿಯ ಯಾವುದೇ ಕಛೇರಿಯ ಕೆಲಸ ಬಾಕಿ ಇರಲಿಲ್ಲ ಮತ್ತು ಆತ ಕೆಲಸ ಮಾಡಿಕೊಡುವ ಸಲುವಾಗಿ ಲಂಚ ಕೇಳಿದ ಎಂದರೆ ಸರಿಯಲ್ಲ. ನಾನು ಈ ದಿನ ಸಾಕ್ಷಿಯನ್ನು ಸಿ.ಡಿ. ಯಲ್ಲಿರುವ ಧ್ವನಿ ಮತ್ತು ಮಾಹಿತಿಯನ್ನು ಆಧರಿಸಿ ಹೇಳುತ್ತಿದ್ದೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಸಿ.ಡಿ.ಗಳನ್ನು ಕೇಳಿಸಿಲ್ಲ ಮತ್ತು ನಾನು ಪೊಲೀಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.